C.R.P.67

Form No.4 (Civil)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No.121/2021 ಸಿ. ಡಬ್ಲ್ಯೂ - 2 ಪಿ. ಡಬ್ಲ್ಯೂ -2

ದಿನಾಂಕ : 01.09.2023 ರಂದು ಪ್ರಮಾಣ ವಚನ ಬೋದಿಸಲಾಗಿದೆ

| | |
|---|---|
| ಸಾಕ್ಷಿದಾರರ ಹೆಸರು | ಜಿ ಡಿ ರವಿ |
| ತಂದೆಯ ಹೆಸರು | ದೊಡ್ಡಹೈದೇಗೌಡ |
| ವಯಸ್ಸು | 47 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಗೆಜ್ಜಲಗೆರೆ ಗ್ರಾಮ |

ಮುಖ್ಯ ವಿಚಾರಣೆ : ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ :

1. ಫಿರ್ಯಾದಿ ನನ್ನ ಅಣ್ಣ. ನಾನು ಮತ್ತು ನನ್ನ ಅಣ್ಣ ಪ್ರತ್ಯೇಕವಾಗಿ ವಾಸವಿದ್ದೇವೆ. ನನಗೆ ಚಾಸಾ-3 ರಿಂದ 8 ಗೊತ್ತು. ಅವರುಗಳು ನಮ್ಮ ಊರಿನವರು. ನ್ಯಾಯಾಲಯದ ಮುಂದಿರುವ ಆರೋಪಿಗಳ ಪೈಕಿ ನನಗೆ 5 ನೇ ಆರೋಪಿ, 6 ನೇ ಆರೋಪಿ ಹಾಗೂ 1 ನೇ ಆರೋಪಿಗಳು ಗೊತ್ತು.

2. ನನ್ನ ಜಮೀನು ಗೆಜ್ಜಲಗೆರೆಯ ಕೆ ಎಂ ಎಫ್ ಡೈರಿಯ ಪಕ್ಕ ಇದೆ. ನಾನು ಪ್ರತಿ ದಿನ ಸಾಮಾನ್ಯವಾಗಿ ರಾತ್ರಿ 8.30 ಕ್ಕೆ ನನ್ನ ಜಮೀನಿನ ಬಳಿ ಹೋಗಿ ಬೋರ್ವೆಲ್ ನಿಂದ ಬೆಳೆಗೆ ನೀರು ಹಾಯಿಸುವ ಪದ್ದತಿ ಇಟ್ಟುಕೊಂಡಿದ್ದೇನೆ. ದಿಃ 10.05.2021 ರಂದು ನಾನು ನಮ್ಮ ಊರಿನ ವೃತ್ತದ ಬಳಿ ಇರುವ ವಿಶ್ವೇಶ್ವರಯ್ಯ ನವರ ಪ್ರತಿಮೆ ಬಳಿ ರಾತ್ರಿ 8.30 ರ ಸಮಯದಲ್ಲಿ ನಿಂತಿದ್ದೆ. ಸದರಿ ಪ್ರತಿಮೆ ಇರುವ ಸ್ಥಳದಿಂದ ನನ್ನ ಜಮೀನು ಸುಮಾರು 500 ಮೀಟರ್ ದೂರದಲ್ಲಿದೆ. ಆ ಸಮಯದಲ್ಲಿ ಮೈಸೂರು ಕಡೆಯಿಂದ ಬೆಂಗಳೂರು ಕಡೆಗೆ ಒಂದು ಕಾರು ಹೋಗುತ್ತಿತ್ತು ಹಾಗೂ ಸದರಿ ಕಾರಿನ ಮುಂಭಾಗದಲ್ಲಿ ಅಂದರೆ ಮೈಸೂರು ಕಡೆಯಿಂದ ಬೆಂಗಳೂರು ಕಡೆಗೆ ಮೋಟಾರು ಬೈಕು ಒಂದು ಹೋಗುತ್ತಿತು. ಡೈರಿಯ ಹಳ್ಳದ ನೀರು ಹರಿಯುವ ಸೇತುವೆ ಬಳಿ ತನ್ನ ಮುಂದೆ ಹೋಗುತ್ತಿದ್ದ ಬೈಕಿಗೆ ಸದರಿ ಕಾರು ಡಿಕ್ಕಿ ಹೊಡೆಯಿತು. ಆಗ ಸಮಯ ಸುಮಾರು ರಾತ್ರಿ 8.30 ಆಗಿತ್ತು. ಆ ರೀತಿ ಡಿಕ್ಕಿ ಹೊಡೆದಿದ್ದರಿಂದ ಬೈಕಿನಲ್ಲಿದ್ದವರ ಪೈಕಿ ಒಬ್ಬ ವ್ಯಕ್ತಿ ಬೈಕಿನ ಬಲಭಾಗಕೆ ಹಾಗೂ ಮತ್ತೊಬ್ಬ ಬೈಕಿನ ಎಡಭಾಗಕ್ಕೆ ಬಿದ್ದರು. ಆಗ ಬೈಕಿನ ಹಿಂದೆ ಹೋಗುತ್ತಿದ್ದ ಕಾರು ಸ್ವಲ್ಪ ರಿವರ್ಸ್ ತೆಗೆದುಕೊಂಡಿತು. ಸದರಿ ಕಾರಿನ ಹೆಡ್ ಲೈಟ್ ಬೈಕಿನ ಎಡಭಾಗದಲಿ ಬಿದ್ದ ವ್ಯಕ್ತಿಯ ಕಡೆಗೆ ಬೆಳಕು ಚೆಲ್ಲುತಿತ್ತು. ಸದರಿ ಕಾರಿನಿಂದ 1 ನೇ ಆರೋಪಿ ಇಂಧು ಕುಮಾರ್, 6 ನೇ ಆರೋಪಿ ಸ್ವರೂಪ್ ಹಾಗೂ ಅವರ ಜೊತೆ ಇದ್ದ ಇನ್ನಿಬ್ಬರು

ವ್ಯಕ್ತಿಗಳು ಇಳಿದರು. ಸದರಿ 4 ಜನರ ಪೈಕಿ ಇಬ್ಬರ ಕೈಯಲ್ಲಿ ಲಾಂಗುಗಳು ಇದ್ದವು. ಆ ರೀತಿ ಲಾಂಗು ಹಿಡಿದಿದ್ದ ವ್ಯಕ್ತಿಗಳ ಪೈಕಿ ಒಬ್ಬರ ಹೆಸರು ಮಧು ಆಗಿದ್ದು, ಮತ್ತೊಬ್ಬರ ವ್ಯಕ್ತಿಯ ಹೆಸರನ್ನು ನಾನು ಈಗ ಹೇಳಲಾರೆ. ಲಾಂಗು ಹೊಂದಿದ್ದ ಇಬ್ಬರು ವ್ಯಕ್ತಿಗಳ ಪೈಕಿ ಮಧು ಲಾಂಗುನಿಂದ ಬೈಕಿನ ಎಡಭಾಗದಲ್ಲಿ ಬಿದ್ದ ವ್ಯಕ್ತಿಗೆ ಹೊಡೆದನು. ಬೈಕಿನ ಎಡಭಾಗದಲ್ಲಿ ಬಿದ್ದಿದ್ದ ವ್ಯಕ್ತಿಯ ತಲೆಗೆ ಲಾಂಗು ಹೊಂದಿದ್ದ ಮತ್ತೊಬ್ಬ ವ್ಯಕ್ತಿ ಲಾಂಗಿನಿಂದ ಹೊಡೆದನು. ಚಾಕುವನ್ನು ಹೊಂದಿದ್ದ ಆರೋಪಿ ಸ್ವರೂಪ್ ಬೈಕಿನ ಎಡಭಾಗದಲ್ಲಿ ಬಿದ್ದಿದ್ದ ವ್ಯಕ್ತಿಯ ಎದೆಗೆ ಚಾಕುವಿನಿಂದ ಚುಚ್ಚಿದನು. ಅಷ್ಟು ಹೊತ್ತಿಗೆ ಮೈಸೂರು ಕಡೆಯಿಂದ ಬೈಕಿನಲ್ಲಿ ಇನ್ನಿಬ್ಬರ ವ್ಯಕ್ತಿಗಳು ಬಂದರು. ಸದರಿ ವ್ಯಕ್ತಿಗಳ ಹೆಸರು ನನಗೆ ನೆನಪಿಲ್ಲ. ಸದರಿ ಬೈಕಿನ ಹಿಂಭಾಗದಲ್ಲಿ ಕುಳಿತು ಬಂದ ವ್ಯಕ್ತಿ ಆರೋಪಿ ಸ್ವರೂಪ್ ಕೈಯಲ್ಲಿದ್ದ ಚಾಕುವನ್ನು ತೆಗೆದುಕೊಂಡು ಬೈಕಿನ ಎಡಭಾಗದಲ್ಲಿ ಬಿದ್ದಿದ್ದ ವ್ಯಕ್ತಿಯ ಹೊಟ್ಟೆಗೆ ಚುಚ್ಚಿದನು. 1ನೇ ಆರೋಪಿ ಇಂಧು ಕುಮಾರ್ ಅಲ್ಲಿ ಬಿದ್ದಿದ್ದ ಒಂದು ಸಿಮೆಂಟ್ ಕಲ್ಲನ್ನು ತೆಗೆದುಕೊಂಡು ಬೈಕಿನ ಎಡಭಾಗದಲ್ಲಿ ಬಿದ್ದಿದ್ದ ವ್ಯಕ್ತಿಯ ತಲೆಯ ಮೇಲೆ ಎತ್ತಿ ಹಾಕಿದನು.

3. ಘಟನಾಸ್ಥಳ ನಾನು ನಿಂತಿದ್ದ ಸ್ಥಳದಿಂದ ಸುಮಾರು 70-80 ಮೀಟರ್ ದೂರದಲ್ಲಿದ್ದಿತು. ಘಟನೆ ನಡೆಯುವ ಹೊತ್ತಿಗೆ ನಾನು ಮತ್ತು ಇತರೆ ವ್ಯಕ್ತಿಗಳು ನಡೆದುಕೊಂಡು ಘಟನಾಸ್ಥಳದ ಹತ್ತಿರ ಹೋಗುತ್ತಿದ್ದೆವು. ಆ ಸಮಯದಲ್ಲಿ ರಸ್ತೆ ರಿಪೇರಿ ನಡೆಯುತ್ತಿದ್ದುದರಿಂದ ವಿಶ್ವೇಶ್ವರಯ್ಯ ರವರ ಪ್ರತಿಮೆ ಬಳಿಯಿಂದ ಸ್ವಲ್ಪ ದೂರ ಬೈಕಿನಲ್ಲಿ ಬಂದ ನಾನು ಬೈಕನ್ನು ನಿಲ್ಲಿಸಿ ನಂತರ ನಡೆದುಕೊಂಡು ಮುಖ್ಯರಸ್ತೆಯಲ್ಲಿ ಹೋಗುತ್ತಿದ್ದೆನು.

4. ಬೈಕಿನ ಬಲಭಾಗದಲ್ಲಿ ಬಿದ್ದಿದ್ದ ವ್ಯಕ್ತಿಗೆ ಆರೋಪಿ ಮಧು ಲಾಂಗಿನಿಂದ ಹೊಡೆಯಲು ಹೋದನು. ಸದರಿ ಲಾಂಗಿನ ಏಟು ಬಲಭಾಗದಲ್ಲಿ ಬಿದ್ದಿದ್ದ ವ್ಯಕ್ತಿಯ ಬೆನ್ನಿಗೆ ತಗುಲಿತು. ಸ್ಥಳದ ಬಳಿ ಹೋಗುತ್ತಿದ್ದ ನಾವೆಲ್ಲಾ ಕೂಗಿದ್ದರಿಂದ ಕಾರಿನಲ್ಲಿ ಹಾಗೂ ಬೈಕಿನಲ್ಲಿ ಬಂದಿದ್ದ ವ್ಯಕ್ತಿಗಳು ಸ್ಥಳದಿಂದ ತಮ್ಮ ಕಾರು ಮತ್ತು ಬೈಕಿನಲ್ಲಿ ಹೊರಟು ಹೋದರು. ರಸ್ತೆಯಲ್ಲಿ 2 ಬದಿಗಳಲ್ಲಿ ನಿಧಾನಕ್ಕೆ ಚಲಿಸುತ್ತಿದ್ದ ವಾಹನಗಳ ಹೆಡ್ ಲೈಟಿನ ಸಹಾಯದಿಂದ ಹಾಗೂ ಆರೋಪಿಗಳು ತಂದಿದ್ದ ಕಾರಿನ ಹೆಡ್ ಲೈಟಿನ ಸಹಾಯದಿಂದ ನಾನು ಘಟನೆಯನ್ನು ನೋಡಿರುತ್ತೇನೆ.

5. ಸ್ಥಳಕ್ಕೆ ಆರೋಪಿಗಳು ತೆಗೆದುಕೊಂಡು ಬಂದಿದ್ದ ಕಾರಿನ ಬಣ್ಣ ಕಪ್ಪು ಆಗಿದ್ದು, ಅದರ ನೊಂದಾವಣೆ ಸಂಖ್ಯೆ ಕೆಎ.05.ಎಂಇ.5094 ಆಗಿತ್ತು. ಸ್ಥಳಕ್ಕೆ ಕೆಲವು ಆರೋಪಿಗಳು ತೆಗೆದುಕೊಂಡು ಬಂದಿದ್ದ ಬೈಕಿನ ನೊಂದಾವಣೆ ಸಂಖ್ಯೆ ಕೆಎ.42.ವಿ.9575 ಆಗಿತ್ತು.

6. ನಾವು ಬಿದ್ದಿದ್ದ ವ್ಯಕ್ತಿಗಳ ಬಳಿ ಹೋಗಿ ನೋಡಿದಾಗ ಅವರುಗಳ ಪೈಕಿ ಒಬ್ಬ ವ್ಯಕ್ತಿ ನನ್ನ ಅಣ್ಣನ ಮಗ ಹೇಮಂತ್ ಕುಮಾರ್ ಆಗಿದ್ದು, ಇನ್ನು ಒಬ್ಬ ವ್ಯಕ್ತಿ ನಮ್ಮ ಅಣ್ಣನ ಮನೆಯ ಎದುರುಭಾಗದ ಸುನಿಲ್ ಕುಮಾರ್ ಆಗಿದ್ದನು. ಸದರಿ ಹೇಮಂತ್ ಕುಮಾರ್ ಹಾಗೂ ಸುನಿಲ್ ಕುಮಾರ್ ಆ ದಿನ ಪ್ರಯಾಣ ಮಾಡುತ್ತಿದ್ದ ಬೈಕಿನ ನೊಂದಾವಣೆ ಸಂಖ್ಯೆ ಕೆಎ.11.ಇಜೆ.9688 ಆಗಿತ್ತು. ನಾನು ಹೇಮಂತ್ ಕುಮಾರನ ಹತ್ತಿರ ಹೋಗಿ ನೋಡುವಷ್ಟರಲ್ಲಿ ಹೇಮಂತ ಕುಮಾರನ ಪ್ರಾಣ ಹೊರಟು ಹೋಗಿತ್ತು. ಸ್ಥಳದಲ್ಲಿ ಬಿದ್ದಿದ್ದ ಸುನಿಲ್ ಕುಮಾರನನ್ನು ನೋಡಿದಾಗ ಆತನಿಗೆ ಪ್ರಜ್ಞೆ ತರಲಿಲ್ಲ ಹಾಗೂ ಸ್ಥಳಕ್ಕೆ ಹೋದ ಜನರು ಆತನನ್ನು ಎಬ್ಬಿಸುವ ಪ್ರಯತ್ನ ಮಾಡುತ್ತಿದ್ದರು. ಘಟನಾಸ್ಥಳದಲ್ಲಿ ರಕ್ತ ಬಿದ್ದಿತ್ತು ಹಾಗೂ ಲಾಂಗು ಹೇಮಂತ ಕುಮಾರನ ದೇಹ ಬಿದ್ದ ಸ್ಥಳದ ಎಡಭಾಗಕ್ಕೆ ಬಿದ್ದಿತ್ತು. ನಾನು ಕೂಡಲೇ ನನ್ನ ಅಣ್ಣನಿಗೆ ಫೋನ್ ಮಾಡಿ ವಿಷಯ ತಿಳಿಸಿದೆ ಹಾಗೂ ನನ್ನ ಅಣ್ಣನ ಬಳಿ ಯಾವುದೇ ವಾಹನ ಇರಲಿಲ್ಲವಾದ್ದರಿಂದ ನಾನು ನನ್ನ ಬೈಕನ್ನು ತೆಗೆದುಕೊಂಡು ಹೋಗಿ ನನ್ನ ಅಣ್ಣನನ್ನು ಬೈಕಿನಲ್ಲಿ ಸ್ಥಳಕ್ಕೆ ಕರೆದುಕೊಂಡು ಬಂದೆನು. ಘಟನಾಸ್ಥಳದಿಂದ ನನ್ನ ಅಣ್ಣನ ಮನೆ ಸುಮಾರು 300 ಮೀಟರ್ ದೂರದಲ್ಲಿದೆ.

7. ಗಾಯಗೊಂಡಿದ್ದ ಸುನಿಲ್ ಕುಮಾರನನ್ನು ಜನರು ಮದ್ದೂರು ಆಸ್ಪತ್ರೆಗೆ ಕರೆದುಕೊಂಡು ಹೋಗಲು ರಸ್ತೆಯಲ್ಲಿ ಹೋಗುತ್ತಿದ್ದ ಕಾರಿಗೆ ಹಾಕಿಕೊಂಡರು, ನಾನು ಸಹ ಅವರ ಜೊತೆ ಮದ್ದೂರು ಆಸ್ಪತ್ರೆಗೆ ಹೋದೆನು. ನಮ್ಮ ಊರಿನ ಜನರು ಆಸ್ಪತ್ರೆಗೆ ಬಂದ ನಂತರ ನಾನು ಅವರನ್ನು ಅಲ್ಲೇ ಬಿಟ್ಟು ಘಟನಾಸ್ಥಳಕ್ಕೆ ವಾಪಸ್ಸು ಬಂದೆನು. ನನ್ನ ಅಣ್ಣ ಘಟನಾಸ್ಥಳ ದಿಂದ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟರು. ನನ್ನ ಅಣ್ಣನಿಗೆ ಘಟನೆಯ ವಿವರಗಳನ್ನು ನಾನೇ ತಿಳಿಸಿದ್ದೆನು. ಸ್ಥಳಕ್ಕೆ ಅಬಿನಯ, ಪವನ್ ಕುಮಾರ್ (ಚಾಸಾ-4, 5) ಹಾಗೂ ಇತರರು ಬಂದರು. ನಾನು ಸ್ಥಳಕೆ ಬರುವಷ್ಟರಲ್ಲಿ ನನ್ನ ಅಣ್ಣ ಪೊಲೀಸರಿಗೆ ದೂರು ಕೊಟ್ಟಿದ್ದು ಪೊಲಿಸರು ಸ್ಥಳಕ್ಕೆ ಬಂದರು.

8. ಇಂಧು ಕುಮಾರ್ ಹಾಗೂ ಸಂತೋಷ್ ಘಟನೆಯ ಹಿಂದಿನ ದಿನ ಕ್ರಿಕೆಟ್ ವಿಚಾರದಲ್ಲಿ ಜಗಳವಾಡಿದ್ದರು ಎಂದು ನನಗೆ ಘಟನೆಯ ಮರುದಿನ ಗೊತ್ತಾಯಿತು. ಆಗ ಮೋಹನ್ ಹಾಗೂ ತಮ್ಮೇಗೌಡ (ಚಾಸಾ-7, 8) ಸದರಿ ಇಂದು ಕುಮಾರ್ ಹಾಗೂ ಸಂತೋಷ್ ರವರನ್ನು ಸಮಾಧಾನ ಪಡಿಸಿ ಕಳುಹಿಸಿದ್ದರು ಎಂದು ನನಗೆ ಪವನ್ ಕುಮಾರ್ ತಿಳಿಸಿದರು. ಸದರಿ ಘಟನೆಯ ಸಮಯದಲ್ಲಿ ಸ್ಥಳಕ್ಕೆ ಮೃತ ಹೇಮಂತ್ ಕುಮಾರ ಬಂದು ವಿಚಾರಿಸಿದ್ದನು ಹಾಗೂ ಆ ಸಮಯದಲ್ಲಿ ಆರೋಪಿ ಇಂಧು ಕುಮಾರ್ ಹಾಗೂ ಮೃತ ಹೇಮಂತ್ ಕುಮಾರನ ನಡುವೆ ಜೋರಾಗಿ ಮಾತುಕತೆ ನಡೆಯಿತು ಎಂದು, ಆ ಸಮಯದಲ್ಲಿ ಇಂಧು ಕುಮಾರನು ಪವನ್ ಕುಮಾರನಿಗೆ ನೀನು ಡೈರಿ ಟೆಂಡರ್ ವಿಚಾರದಲ್ಲಿ ಗೆದ್ದು ಹೋಗಿದ್ದೀಯಾ, ಇನ್ನೆರಡು ಮೂರು ದಿನಗಳಲ್ಲಿ ನಾನು ಹೇಮಂತನಿಗೆ ಒಂದು ಗತಿ ಕಾಣಿಸುತ್ತೇನೆ ಎಂದು ಹೇಳಿದ್ದನು ಎಂದು ಪವನ್ ಕುಮಾರ್ ನನಗೆ ಹೇಳಿದನು. ಅಬಿನಯ ಹಾಗೂ ಪವನ್ ಕುಮಾರ ತಮ್ಮ

ವಾಹನಗಳನ್ನು ಡೈರಿ ಹಾಲು ಸರಬರಾಜು ಮಾಡಲು ಬಿಟ್ಟಿರುತ್ತಾರೆ. ದಿಃ 10.05.2021 ರಂದು ಮ.3.30 ರ ಸಮಯದಲ್ಲಿ ಅಬಿನಯ ಎಂಬ ವ್ಯಕ್ತಿಯು ತನ್ನ ವಾಹನವನ್ನು ಬಿಟ್ಟು ಹೋಗಿದ್ದ ತನ್ನ ವಾಹನದ ಚಾಲಕನನ್ನು ಹುಡುಕಿಕೊಂಡು 23 ನೇ ನಾಲಾ ರಸ್ತೆಯಲ್ಲಿ ಹೋಗುತ್ತಿದ್ದಾಗ ಆರೋಪಿ ಇಂಧು ಕುಮಾರ್, ಸ್ವರೂಪ್ ಹಾಗೂ ಪ್ರಸಾದ್ ಹಾಗೂ ಅವರೊಂದಿಗಿದ್ದ ಮಧು, ನಾಗ, ಅಭಿ, ಅವಿ ಮತ್ತು ಮಹದೇವ ಇವರುಗಳು ಅವನಿಗೆ ಏನಾದರೂ ಒಂದು ಗಣಿ ಕಾಣಿಸಬೇಕು ಎಂದು ಮಾತನಾಡುತ್ತಿದ್ದುದ್ದನ್ನು ಅಬಿನಯ ತಾನು ಕೇಳಿಸಿಕೊಂಡೆನು ಎಂದು ನನಗೆ ತಿಳಿಸಿದನು. ಘಟನೆಯ ಬಗ್ಗೆ ಪೊಲೀಸರು ನನ್ನನ್ನು ಬಹುಶಃ 17 ನೇ ತಾರೀಖಿನಂದು ವಿಚಾರಣೆ ಮಾಡಿರುತ್ತಾರೆ. ಘಟನಾಸ್ಥಳಕ್ಕೆ ಬಂದಿದ್ದ ಪೊಲೀಸರು ಮೃತ ಶವವನ್ನು ಮಂಡ್ಯದ ಶಾವಾಗಾರಕ್ಕೆ ನಾನು ಸ್ಥಳಕ್ಕೆ ಪುನಃ ಬರುವಷ್ಟರಲ್ಲಿ ತೆಗೆದುಕೊಂಡು ಹೋಗಿದ್ದರು.

9. ನಂತರ ಬಹುಶಃ ಮೇ 31 ನೇ ತಾರೀಖಿನಂದು ನನ್ನನ್ನು ಮದ್ದೂರು ಕೋರ್ಟಿಗೆ ಕರೆದಿದ್ದ ಮೇರೆಗೆ ನಾನು ಸದರಿ ಕೋರ್ಟಿಗೆ ಹೋಗಿದ್ದೆನು. ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ ನಾನು ಘಟನೆಯ ವಿವರಗಳನ್ನು ಹೇಳಿರುತ್ತೇನೆ. ನನ್ನ ಹೇಳಿಕೆಗೆ ನ್ಯಾಯಾಧೀಶರು ನನ್ನ ಸಹಿಯನ್ನು ಪಡೆದರು. ಘಟನೆಯ ಎಲ್ಲಾ ವಿವರಗಳನ್ನು ನಾನು ನಡೆದಂತೆ ನಾನು ನ್ಯಾಯಾಧೀಶರ ಮುಂದೆ ಹೇಳಿರುತ್ತೇನೆ.

10. ನಂತರ ನನಗೆ ಕೊರೋನ ವೈರಸ್ ನಿಂದ ಜ್ವರ ಬಂದಿತ್ತು. ತಹಶೀಲ್ದಾರ್ ರವರು ನನಗೆ ಕಳುಹಿಸಿದ್ದ ನೋಟೀಸು ಬಂದಿತ್ತು. ಗುರುತು ಹಚ್ಚಲು ಮಂಡ್ಯ ಖಾರಾಗೃಹಕ್ಕೆ ಬರುವಂತೆ ನನ್ನನ್ನು ತಹಶೀಲ್ದಾರ್ ರವರು ಕರೆದಿದ್ದರು. ಬಹುಶಃ ಜುಲೈ 17 ರಂದು ನಾನು ಮಂಡ್ಯದ ಖಾರಾಗೃಹಕ್ಕೆ ಹೋಗಿದ್ದೆನು. ತಹಶೀಲ್ದಾರ್ ರವರು ಸಲ್ಲಿಸಿರುವ ವರದಿಯಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ವರದಿಯನ್ನು ನಿಪಿ.36 ಎಂದೂ, ಸಾ. ಸಹಿಯನ್ನು ನಿಪಿ.36(ಎ) ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.
(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಬಿ.ಜಿ.ರಮಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.